UASB Library
Newspaper Clippings
Tuesday 10-01-2023 Pg .1
Jai Kisan

ಜಾಲತಾಣದಿಂದ ಕೃಷಿ ಮಾಹಿತಿ ತಲುಪಿಸಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಪ್ರಸ್ತುತ ಸಾಮಾಜಿಕ ಜಾಲತಾಣಗಳು ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತಿದ್ದು, ರೈತರಿಗೆ ಕೃಷಿ ಮಾಹಿತಿಯನ್ನು ವಾಟ್ಸ್‌ಆ್ಯಪ್, ಯೂಟ್ಯೂಬ್, ಫೇಸ್‌ಬುಕ್ ಮೂಲಕ ತಲುಪಿಸಲು ಹೆಚ್ಚಿನ ಕಾಳಜಿ ವಹಿಸಬೇಕಿದೆ ಎಂದು ಹೈದರಾಬಾದ್‌ನ ಕೃಷಿ ವಿಸ್ತರಣಾ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕಿ ಡಾ. ಆರ್. ವಸಂತ ಹೇಳಿದ್ದಾರೆ.

ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ವಿವಿ ಹಾಗೂ ಹೈದರಾಬಾದ್ ವಿಸ್ತರಣಾ ಶಿಕ್ಷಣ ಸಂಸ್ಥೆ ಜಂಟಿ ಸಹಯೋಗದಲ್ಲಿ ತಂತ್ರಜ್ಞಾನದ ಪರಿಣಾಮಕಾರಿ ವರ್ಗಾವಣೆಗಾಗಿ ಕೃಷಿ ಪತ್ರಿಕೋದ್ಯಮ ಕುರಿತು ಏರ್ಪಡಿಸಿರುವ 5 ದಿನಗಳ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದಿನೇದಿನೆ ಕೃಷಿ ಕ್ಷೇತ್ರ ಸಮಸ್ಯೆಗಳ ಸುಳಿಗೆ ಸಿಲುಕುತ್ತಿದ್ದರೂ ರೈತರು ಎದೆಗುಂದದೆ ವ್ಯವಸಾಯದಲ್ಲಿ ಮುಂದುವರಿದಿದ್ದಾರೆ. ಇವರಿಗೆ ಬೆಳೆಗಳ ಹೊಸ ತಳಿ, ತಂತ್ರಜ್ಞಾನದ ಮೂಲಕ ಮಾಹಿತಿಯನ್ನು ಒದಗಿಸಲು ಸಾಮಾಜಿಕ ಜಾಲತಾಣಗಳು ಸೂಕ್ತ ವೇದಿಕೆಯಾಗಲಿವೆ. ಗ್ರಾಮೀಣರು ಕೂಡ ಆ್ಯಂಡ್ರಾಯ್ಡ್ ಮೊಬೈಲ್‌ಗಳನ್ನು ಬಳಸುತ್ತಿರುವುದರಿಂದ ಮಾಹಿತಿ ರವಾನೆ ಸುಲಭವಾಗಲಿದೆ ಎಂದು ತಿಳಿಸಿದರು.



ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಸೋಮವಾರ ಆಯೋಜಿಸಿದ್ದ 'ತಂತ್ರಜ್ಞಾನದ ಪರಿಣಾಮಕಾರಿ ವರ್ಗಾವಣೆಗಾಗಿ ಕೃಷಿ ಪತ್ರಿಕೋದ್ಯಮ' ಕುರಿತಾದ ತರಬೇತಿ ಕಾರ್ಯಕ್ರಮವನ್ನು ಹೈದರಾಬಾದ್‌ನ ಕೃಷಿ ವಿಸ್ತರಣಾ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕಿ ಡಾ. ಆರ್.ವಸಂತ ಉದ್ಘಾಟಿಸಿದರು. ಡಾ. ಎ.ಶೈಲಜಾ, ಡಾ. ಕೆ.ಶಿವರಾಮು ಮತ್ತಿತರರಿದ್ದರು.

ಸ್ಥಳೀಯ ವಿಸ್ತರಣಾ ಕಾರ್ಯಕರ್ತರಿಗೆ ಕೃಷಿ ಪತ್ರಿಕೋದ್ಯಮ ಬಗ್ಗೆ ತರಬೇತಿ ಹಮ್ಮಿಕೊಂಡಲ್ಲಿ ಪ್ರಗತಿಪರ ಹಾಗೂ ಮುಂಚೂಣಿ ರೈತರ ಕುರಿತು ಯಶೋಗಾಥೆಗಳು ಹೆಚ್ಚು ಹೆಚ್ಚು ಪ್ರಕಟವಾಗಲು ಸಹಕಾರಿಯಾಗಬಹುದು.

| ಡಾ.ಎ. ಶೈಲಜಾ ಹೈದರಾಬಾದ್‌ನ ಕೃಷಿ ವಿಸ್ತರಣಾ ಶಿಕ್ಷಣ ಸಂಸ್ಥೆ ಪ್ರಾಧ್ಯಾಪಕಿ

ಕೃಷಿ ವಿವಿಯ ಸಿಬ್ಬಂದಿ ತರಬೇತಿ ಘಟಕದ ಮುಖ್ಯಸ್ಥ ಡಾ. ಕೆ. ಶಿವರಾಮು ಮಾತನಾಡಿ, ದೇಶದಲ್ಲಿ ಶೇ.60 ಜನಸಂಖ್ಯೆಯಷ್ಟು ರೈತರಿದ್ದರೂ, ಸಮೂಹ ಮಾಧ್ಯಮಗಳಲ್ಲಿ ಕೃಷಿ ಬಗ್ಗೆ ಹೆಚ್ಚಿನ ಮಾಹಿತಿ ದೊರಕುತ್ತಿಲ್ಲ. ಕೃಷಿಕರು ದಿನಪತ್ರಿಕೆಗಳನ್ನು ಕೊಂಡು ಓದಲು ಮುಂದಾದಲ್ಲಿ ಈ ಪ್ರವೃತ್ತಿ ಬದಲಾವಣೆಯಾಗಿ ರಾಜಕೀಯ, ಕ್ರೀಡೆ, ಸಿನಿಮಾ ರೀತಿ ವ್ಯವಸಾಯ ಕ್ಷೇತ್ರಕ್ಕೂ ಮಹತ್ವ ಸಿಗಬಹುದು. ಪ್ರಗತಿಪರ ರೈತರ ಯಶೋಗಾಥೆ ಹಾಗೂ ಸಾಧಕ ಕೃಷಿಕರ ಲೇಖನಗಳು ಮುದ್ರಣ ಮಾಧ್ಯಮದಲ್ಲಿ ಹೆಚ್ಚಾಗಿ ಪ್ರಕಟಿಸಿದರೆ ಕೃಷಿ ಕೈಗೊಳ್ಳಲು ಮುಂದೆ ಬರುವವರಿಗೆ ಅನುಕೂಲವಾಗಲಿದೆ ಎಂದು ಪ್ರತಿಪಾದಿಸಿದರು.

ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದ ಮುಖ್ಯಸ್ಥ ಡಾ. ಕೆ.ಪಿ. ರಘುಪ್ರಸಾದ್, ಪ್ರಾಧ್ಯಾಪಕಿ ಡಾ. ಕಲ್ಪನಾ ಮತ್ತಿತರರಿದ್ದರು.



ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಹಾಗೂ ಹೈದರಾಬಾದ್‌ನ ವಿಸ್ತರಣಾ ಶಿಕ್ಷಣ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಜಿಕೆವಿಕೆಯಲ್ಲಿ ಹಮ್ಮಿಕೊಂಡಿರುವ ತಂತ್ರಜ್ಞಾನದ ಪರಿಣಾಮಕಾರಿ ವರ್ಗಾವಣೆಗಾಗಿ ಕೃಷಿ ಪತ್ರಿಕೋದ್ಯಮ ತರಬೇತಿ ಕಾರ್ಯಾಗಾರವನ್ನು ಸಿಬ್ಬಂದಿ ತರಬೇತಿ ಘಟಕದ ಮುಖ್ಯಸ್ಥರಾದ ಡಾ.ಕೆ. ಶಿವರಾಮು ಉದ್ಘಾಟಿಸಿದರು. ಡಾ.ಎ. ಶೈಲಜ, ಡಾ.ಆರ್. ವಸಂತ, ಡಾ.ಕೆ.ಪಿ. ರಘು ಪ್ರಸಾದ್, ಡಾ.ಬಿ. ಕಲ್ಪನಾ ಮತ್ತಿತರರಿದ್ದರು.

10-01-2023
Vijayavani Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in

ಸಂಜೆವಾಣಿ 7

ಕೃಷಿ ಪತ್ರಿಕೋದ್ಯಮ ತರಬೇತಿ ಉದ್ಘಾಟನೆ

ಬೆಂಗಳೂರು ,ಜ.9:ಕೃಷಿ ವಿಶ್ವವಿದ್ಯಾಲಯಬೆಂಗಳೂರುಮತ್ತು ವಿಸ್ತರಣಾಶಿಕ್ಷಣಸಂಸ್ಥೆಯುತಂತ್ರಜ್ಞಾನದ ಪರಿಣಾಮಕಾರಿ ವರ್ಗಾವಣೆಗಾಗಿ ಕೃಷಿ ಪತ್ರಿಕೋದ್ಯಮ ಕುರಿತ 5 ದಿನಗಳತರಬೇತಿಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಕಾರ್ಯಕ್ರಮವನ್ನುಉದ್ಘಾಟಿಸಿದ ವಿಸ್ತರಣಾ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕರಾದ ಡಾ.ಎ ಶೈಲಜ ಸ್ಥಳೀಯಮಟ್ಟದಲ್ಲಿಮತ್ತುಸ್ಥಳಿಕೀಯ ವಿಸ್ತರಣಾ ಾರ್ಯಕರ್ತರಿಗೆ ಕೃಷಿ ಪತ್ರಿಕೋದ್ಯಮ ತರಬೇತಿಗಳನ್ನು ಹಮ್ಮಿಕೊಂಡರೆ ಪ್ರಗತಿಪರ ಮತ್ತು ಮುಂಚೂಣಿ ರೈತರ ಕುರಿತು ಯಶೋಗಾಥೆಗಳು ಹೆಚ್ಚು ಪ್ರಕಟಗೊಳ್ಳಲುಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಡಾ.ಕೆ ಶಿವರಾಮು ಅವರು ಭಾರತ ದೇಶದ 60%ರಷ್ಟು ಜನಸಂಖ್ಯೆ ರೈತರಾಗಿದ್ದಾರೆ. ಆದರೆ, ಸಮೂಹ ಮಾಧ್ಯಮಗಳಾದ ದಿನಪತ್ರಿಕೆಗಳು ಮತ್ತುವಿದ್ಯುನ್ಮಾನ ಮಾಧ್ಯಮಗಳಲ್ಲಿ ಕೃಷಿಯ ಬಗ್ಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ರಾಜಕೀಯ, ಕ್ರೀಡೆ ಮತ್ತುಚಲನಚಿತ್ರೋದ್ಯಮಕ್ಕೆಹೆಚ್ಚಿನ ಮಹತ್ವನೀಡಲಾಗುತ್ತದೆ.ಕೃಷಿಕರುದಿನ ಪತ್ರಿಕೆಗಳನ್ನುಓದಲುಮುಂದಾದಾಗ ಈ ಪ್ರವೃತ್ತಿ ಬದಲಾಗಬಹುದು ಎಂದರು.

ಕಾರ್ಯಕ್ರಮದಮುಖ್ಯಅತಿಥಿಗಳಾಗಿ ಭಾಗವಹಿಸಿದ್ದ ವಿಸ್ತರಣಾ ಶಿಕ್ಷಣ ಸಂಸ್ಥೆ ಪ್ರಾಧ್ಯಾಪಕರಾದ ಡಾ.ಆರ್ ವಸಂತ ಅವರುಇತ್ತೀಚಿನದಿನಗಳಲ್ಲಿ ಸಾಮಾಜಿಕಜಾಲತಾಣಗಳುಹೆಚ್ಚಿನ ಮಹತ್ವವನ್ನುಪಡೆದುಕೊಳ್ಳುತ್ತಿವೆ.ಕೃಷಿ ಕುರಿತ ಮಾಹಿತಿ,ವಿಡಿಯೋ ಮತ್ತು ಛಾಯಾಚಿತ್ರಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹೆಚ್ಚಿನ ಸಂಖ್ಯೆಯ ರೈತರಿಗೆ ತಲುಪಿಸಲು ಸಹಕಾರಿಯಾಗುತ್ತದೆ ಎಂದರು.



ಈನಾಡು
ಮಂಗಳವಾರం జనవరి 10, 2023

నూతన వ్యవసాయ పద్ధతులపై అవగాహన కల్పించండి

బెంగళూరు(యశ్వంతపుర),న్యూస్‌టుడే : దేశంలో 60 శాతం మంది ప్రజలు వ్యవసాయంపై ఆధారపడుతున్నారని, ఆ రంగానికి సరైన ప్రచారాన్ని మాధ్యమాలు కల్పించడం లేదని బెంగళూరు వ్యవసాయ విశ్వవిద్యాలయ సిబ్బంది శిక్షణ విభాగం అధిపతి డాక్టర్ శివరాం అసంతృప్తి వ్యక్తం చేశారు. సోమవారం జీకేవీకేలో బెంగళూరు వ్యవసాయ విశ్వవిద్యాలయం, హైదరాబాద్ వ్యవసాయ విస్తరణ శిక్షణ సంస్థ సంయుక్తంగా వ్యవసాయ మాధ్యమంపై ఏర్పాటు చేసిన ఐదో రోజుల శిక్షణ శిబిరాన్ని ఆయన ప్రారంభించి మాట్లాడారు. రాజకీయాలు, క్రీడలు, సినిమాలు తదితర వాటికి దొరికినంత ప్రచారం వ్యవసాయం, రైతులకు లభించడం లేదన్నారు. వ్యవసాయ పరిశోధనలు, రైతుల విజయాలు, నూతన ఆధునిక వ్యవసాయ పద్ధతుల గురించి ఎక్కువగా ప్రచారం చేయాలన్నారు. హైదరాబాద్ వ్యవసాయ విస్తరణ శిక్షణ సంస్థ అధ్యాపకుడు డాక్టర్ ఎ.శైలజ మాట్లాడుతూ.. ప్రగతిపర రైతులు సాధించిన విజయాల గురించి మాధ్యమాలు ప్రసారం చేయాల్సిన అవసరం ఉందన్నారు. కార్యక్రమంలో డాక్టర్ ఆర్.వసంత, డాక్టర్ కేపీ రముప్రసాద్, డాక్టర్ బి.కల్పన తదితరులు పాల్గొన్నారు.



శిక్షణ శిబిరాన్ని ప్రారంభిస్తున్న డా.శివరాం, డా.శైలజ, డా.కల్పన, తదితరులు

ಕೃಷಿ ಪತ್ರಿಕೋದ್ಯಮಕ್ಕೆ ಒಲವು ತೋರಿ



ಬೆಂಗಳೂರು: ವಿದ್ಯಾರ್ಥಿಗಳು ಕೃಷಿ ಪತ್ರಿಕೋದ್ಯಮ ಕಡೆಗೆ ಹೆಚ್ಚಿನ ಒಲವು ತೋರಬೇಕು ಎಂದು ಜಿಕೆವಿಕೆ ಕೃಷಿ ವಿಶ್ವವಿದ್ಯಾನಿಲಯ ಸಿಬ್ಬಂದಿ ತರಬೇತಿ ಘಟಕ ಮುಖ್ಯಸ್ಥ ಡಾ.ಕೆ.ಶಿವರಾಮು ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆ ಮತ್ತು ಹೈದರಾಬಾದ್ ವಿಸ್ತರಣಾ ಶಿಕ್ಷಣ ಸಂಸ್ಥೆ ಜಂಟಿ ಆಶ್ರಯದಲ್ಲಿ ಜಿಕೆವಿಕೆ ಆವರಣದಲ್ಲಿ ಹಮ್ಮಿಕೊಂಡ ಕೃಷಿ ಪತ್ರಿಕೋದ್ಯಮ ತರಬೇತಿ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಅವರು,

ವಿದ್ಯಾರ್ಥಿಗಳು ಕೃಷಿ ಪತ್ರಿಕೋದ್ಯಮದ ಕಡೆಗೆ ಹೆಚ್ಚಿನ ಒಲವು ತೋರುವುದು ಅಗತ್ಯವಾಗಿದೆ. ಅದರ ಜೊತೆಗೆ ಕೃಷಿಕರಿಗೂ ತರಬೇತಿ ನೀಡಬೇಕು. ಆ ಮೂಲಕ ಅನುಭಾವಿ ಲೇಖನ ಹೊರಬರಲು ಸಾಧ್ಯವಾಗುತ್ತದೆ ಎಂದರು.

ಹೈದರಾಬಾದ್ ವಿಸ್ತರಣಾ ಶಿಕ್ಷಣ ಸಂಸ್ಥೆ ಪ್ರಾಧ್ಯಾಪಕಿ ಡಾ.ಎ.ಶೈಲಜಾ ಮಾತನಾಡಿ, ಸ್ಥಳೀಯ ಮಟ್ಟದಲ್ಲಿ ಮತ್ತು ಸ್ಥಳೀಯ ವಿಸ್ತರಣಾ ಕಾರ್ಯಕರ್ತರಿಗೆ ಕೃಷಿ ಪತ್ರಿಕೋದ್ಯಮದ ತರಬೇತಿ ಪ್ರಗತಿಪರ ಮತ್ತು ಮುಂಚೂಣಿ ರೈತರ ಕುರಿತು ಯಶೋಗಾಥೆಗಳು ಹೆಚ್ಚು ಹೆಚ್ಚು ಪ್ರಕಟಗೊಳ್ಳಲು ಸಾಧ್ಯ ಎಂದು ಹೇಳಿದರು.

ಹೈದರಾಬಾದ್ ವಿಸ್ತರಣಾ ಶಿಕ್ಷಣ ಸಂಸ್ಥೆ ಪ್ರಾಧ್ಯಾಪಕ ಡಾ.ಆರ್.ವಸಂತ ಮಾತನಾಡಿ, ಪ್ರಸ್ತುತ ಸಾಮಾಜಿಕ ಜಾಲತಾಣ ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತಿವೆ. ಆದರಿಂದ ಕೃಷಿ ಕುರಿತ ಮಾಹಿತಿಗಳನ್ನು ಜಾಲತಾಣಗಳಲ್ಲಿ ಹರಿಬಿಡುವ ಮೂಲಕ ಹೆಚ್ಚಿನ ಸಂಖ್ಯೆ ರೈತರಿಗೆ ಏಕಕಾಲದಲ್ಲಿ ಸಂಪೂರ್ಣ ಮಾಹಿತಿ ತಲುಪಿಸಲು ಸಾಧ್ಯ ಎಂದರು. ಕಾರ್ಯಕ್ರಮದಲ್ಲಿ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ ಮುಖ್ಯಸ್ಥ ಡಾ.ಕೆ.ಪಿ.ರಘು ಪ್ರಸಾದ್ ಮತ್ತು ಸಿಬ್ಬಂದಿ ತರಬೇತಿ ಘಟಕ ಪ್ರಾಧ್ಯಾಪಕಿ ಡಾ.ಬಿ.ಕಲ್ಪನಾ ಉಪಸ್ಥಿತರಿದ್ದರು.

10-01-2023
Hosadiganta Pg 12

ಕೃಷಿ ಪತ್ರಿಕೋದ್ಯಮ ಕುರಿತು ತರಬೇತಿ

■ **ವಿಕ ಸುದ್ದಿಲೋಕ** ಬೆಂಗಳೂರು



ಬೆಂಗಳೂರು ಮತ್ತು ಹೈದರಾಬಾದ್‌ನ ವಿಸ್ತರಣಾ ಶಿಕ್ಷಣ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ತಂತ್ರಜ್ಞಾನದ ಪರಿಣಾಮಕಾರಿ ವರ್ಗಾವಣೆಗಾಗಿ ಕೃಷಿ ಪತ್ರಿಕೋದ್ಯಮ ಕುರಿತ ಐದು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜಿಕೆವಿಕೆ ಆವರಣದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಬ್ಬಂದಿ ತರಬೇತಿ ಘಟಕದ ಮುಖ್ಯಸ್ಥರಾದ ಡಾ. ಕೆ. ಶಿವರಾಮು ವಹಿಸಿದ್ದರು.

ಈ ವೇಳೆ ಮಾತನಾಡಿದ ಅವರು ''ದೇಶದ ಜನಸಂಖ್ಯೆಯ ಶೇ.60ರಷ್ಟು ಜನರು ರೈತರಾಗಿದ್ದಾರೆ. ಆದರೆ, ಸಮೂಹ ಮಾಧ್ಯಮಗಳಾದ ದಿನಪತ್ರಿಕೆಗಳು ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕೃಷಿಯ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವಂತಾಗಬೇಕು,'' ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಹೈದರಾಬಾದ್‌ನ ವಿಸ್ತರಣಾ ಶಿಕ್ಷಣ ಸಂಸ್ಥೆ ಪ್ರಾಧ್ಯಾಪಕರಾದ ಡಾ. ಎ. ಶೈಲಜಾ, ''ಸ್ಥಳೀಯ ಮಟ್ಟದಲ್ಲಿ ಮತ್ತು ಸ್ಥಳೀಯ ವಿಸ್ತರಣಾ ಕಾರ್ಯಕರ್ತರಿಗೆ ಕೃಷಿ ಪತ್ರಿಕೋದ್ಯಮ ಕುರಿತು ತರಬೇತಿಗಳನ್ನು ಹಮ್ಮಿಕೊಂಡರೆ ಪ್ರಗತಿಪರ ಮತ್ತು ಮುಂಚೂಣಿ ರೈತರನ್ನು ಕುರಿತು ಯಶೋಗಾಥೆಗಳು ಹೆಚ್ಚು ಹೆಚ್ಚು ಪ್ರಕಟಗೊಳ್ಳಲು ಸಹಕಾರಿಯಾಗುತ್ತದೆ'' ಎಂದರು.

ಹೈದರಾಬಾದ್‌ನ ವಿಸ್ತರಣಾ ಶಿಕ್ಷಣ ಸಂಸ್ಥೆ ಪ್ರಾಧ್ಯಾಪಕರಾದ ಡಾ. ಆರ್. ವಸಂತ ಮಾತನಾಡಿ, '' ಕೃಷಿ ಕುರಿತ ಮಾಹಿತಿ, ವಿಡಿಯೋ ಮತ್ತು ಛಾಯಾಚಿತ್ರಗಳು ವಾಟ್ಸ್ಯಾಪ್, ಯೂಟ್ಯೂಬ್ ಮೂಲಕ ರೈತರಿಗೆ ಏಕಕಾಲದಲ್ಲಿ ತಲುಪಿಸಲು ಸಹಕಾರಿಯಾಗುತ್ತದೆ,'' ಎಂದರು.

ಕಾರ್ಯಕ್ರಮದಲ್ಲಿ ಡಾ. ಕೆ.ಪಿ. ರಘುಪ್ರಸಾದ್ ಮತ್ತು ಸಿಬ್ಬಂದಿ ತರಬೇತಿ ಘಟಕದ ಪ್ರಾಧ್ಯಾಪಕರಾದ ಡಾ. ಬಿ. ಕಲ್ಪನಾ ಉಪಸ್ಥಿತರಿದ್ದರು.

10-01-2023
V-karnataka Pg 08